
# ಅಗ್ನಿ ಮತ್ತು ಹಿಮ

ಆಂಗ್ಲ ಕವಿ ರಾಬರ್ಟ್ ಫ್ರಾಸ್ಟ್ 'ಅಗ್ನಿ ಮತ್ತು ಹಿಮ' ಎಂಬ ಪದ್ಯವನ್ನು ಬರೆದಿದ್ದಾನೆ. ಅದರಲ್ಲಿ ಹಿಮವನ್ನು ಅತ್ಯಂತ ಕ್ರೂರಿಯೆಂಬಂತೆ ಕರೆದಿದ್ದಾನೆ. 'ಅಗ್ನಿ'ಯನ್ನು ಕಾವು ಎಂಬ ಅರ್ಥದಲ್ಲಿ ಭಾವಿಸಿ, ಅವು ಅಗತ್ಯ ಬೇಕಾದ ಜೀವಪರವಾದ ಅಂಶವೆಂದು ಗುರುತಿಸುತ್ತಾನೆ. ಕಾವು ಸೃಷ್ಟಿಗೆ ಪೂರಕವಾಗಿ ಕೆಲಸ ಮಾಡುತ್ತದೆ. ಅದಿಲ್ಲದಿದ್ದರೆ ಒಳ್ಳೆಯ ಗಾಳಿ, ಮಣ್ಣು, ನೀರುಗಳಿದ್ದರೂ ಸೃಷ್ಟಿ ಸಾಧ್ಯವಾಗುವುದಿಲ್ಲ. ಹೆಣ್ಣು ಗಂಡಿನ ಪ್ರೀತಿಯೆಂಬುದು ಬೆಚ್ಚನೆಯ ಅನುಬಂಧ. ಈ ಬೆಚ್ಚನೆಯ ಅನುಬಂಧದಲ್ಲಿರುವ ಸಮಾಗಮ ಕ್ರಿಯೆಯಲ್ಲಿ ಮಾನವ ಜನಾಂಗ ಮುಂದುವರಿಯುವ ಸಾರ್ಥಕ ಕೆಲಸವಾಗುತ್ತದೆ. ಪ್ರತಿ ಬೀಜ ಮೊಳಕಯೊಡೆಯುವಾಗ ಬಿಸಿಯ ಸೃಷ್ಟಿಯಾಗುತ್ತದೆ. ಈ ಬಿಸಿ ಜೀವದ ಇರುವಿಕೆಗೆ– ಮುಂದುವರಿಕೆಗೆ ಸಂಕೇತವಾಗಿ ಕೆಲಸ ಮಾಡುತ್ತದೆ.



ಅದಕ್ಕೆ ತದ್ವಿರುದ್ಧವಾಗಿ ಶೀತಲ ಮನೋಧರ್ಮ ಅಪಾಯಕಾರಿಯಾದುದು. ಅದು ಒಳಗೊಳಗೆ ಕೊರೆಯುತ್ತದೆ. ಅದು ಸಾವಿಗೆ ಸಂಕೇತ; ಕೊಳೆತದ ಸಂಕೇತ; ವಿನಾಶದ ಸಂಕೇತ. ಈ ವಾಸ್ತವಾಂಶವನ್ನು ಎಲ್ಲ ಕವಿ ದಾರ್ಶನಿಕರು ಒಪ್ಪಿ, ಕಾಲ ಕಾಲಕ್ಕೆ ಪುನರುಚ್ಚಿಸುತ್ತಾ ಬಂದಿದ್ದಾರೆ. ಸೃಷ್ಟಿಪರರಾದ ಈ ಮಂದಿ ಬೆಚ್ಚನೆಯ ಪರವಿದ್ದುದು ಆಶ್ಚರ್ಯವಲ್ಲ. ಸೃಷ್ಟಿಯ ಈ ಮುಖ್ಯ ಅಂಶಗಳು ಮೂಲಭೂತ ವಸ್ತುಗಳಲ್ಲಿ ಪ್ರಧಾನವಾದವು. ಈ ಜಗತ್ತಿನ ಸಮಸ್ತವೂ ಈ ಮೂಲಭೂತ 'ವಸ್ತು'ಗಳಾದ ಅಗ್ನಿ, ಗಾಳಿ. ನೀರು, ಮಣ್ಣುಗಳಿಂದ ಸೃಷ್ಟಿಯಾಗಿದೆಯೆಂದು ತತ್ತ್ವಶಾಸ್ತ್ರ ಮತ್ತು ವಿಜ್ಞಾನಗಳು ಸಾರುತ್ತವೆ. (ಭಾರತೀಯ ತತ್ತ್ವಶಾಸ್ತ್ರ ಕೂಡ ಈ ನಾಲ್ಕರ ಜೊತೆ 'ಆಕಾಶ'ವನ್ನು ಸೇರಿಸಿ ಪಂಚಭೂತವೆಂದು ಕರೆದಿದೆ.) ಅಂದ ಮೇಲೆ ಈ ಎಲ್ಲಾ ಮೂಲಭೂತ ವಸ್ತಗಳು ಅತ್ಯಂತ ಮುಖ್ಯವೆಂದಾಯಿತು. ಅದ'ರಲ್ಲಿ ನಮ್ಮ ಕವಿ ಫ್ರಾಸ್ಟ್ ಎರಡರ ಬಗ್ಗೆಯೇ ಏಕೆ ಮಾತನಾಡುತ್ತಾನೆ.

'ಹಿಮ'ವೆಂಬುದು ನೀರಿನ ಸಾಂದ್ರರೂಪ ಅದಿಲ್ಲದೆ ಬದುಕು ಅಸಾಧ್ಯ. ಈ ಗ್ರಹದ ಮುಕ್ಕಾಲು ಅದೇ ಆಗಿದೆ. ನಮ್ಮ ದೇಹದ ಬಹುಭಾಗ ಅದರಿಂದಲೇ ತುಂಬಿದೆ. ಅಂದಮೇಲೆ 'ನೀರು' ಶೀತಲವೆಂದು ಏಕೆ ಕರೆಸಿಕೊಂಡಿತು. 'ನೀರು' ಎಂದು ಕರೆಯಿಸಿಕೊಳ್ಳುವಾಗ ಅದು 'ಜೀವದ್ರವ್ಯ' ಅದರ ಕೊರೆಯಾದಾಗ ಸಾವು ನಿಶ್ಚಿತ! ಇಲ್ಲೊಂದು ವಿಚಿತ್ರ ಸತ್ಯವಿದೆ; ನೀರು ದೇಹಕ್ಕೆ ಕಡಿಮೆಯಾದಾಗಲೂ ಸಾವು! ನೀರು ಅಧಿಕವಾದರೂ ಸಾವು! ಅಂದರೆ ಅದರಲ್ಲೊಂದು ಸಮತೋಲನ ನ್ಯಾಯದ ಕಲ್ಪನೆಯಿದೆ. ಯಾವ ಸಮಯದಲ್ಲಾದರೂ ಏರುಪೇರಾಗಬಾರದು. ಬದುಕು ಬಯಸುವುದು ವಸ್ತುವೊಂದರ ಔಚಿತ್ಯವರಿತ ಭಾಗವನ್ನು.

'ಅಗ್ನಿ' ಬೆಂಕಿಯಾದಾಗ ಕೂಡ ಮಾರಕವೇ! ಅದು ಬೆಚ್ಚನೆಯ ಅನುಭವವಾಗಿ ಮಾತ್ರವಿರಬೇಕು. ಇಲ್ಲದಿದ್ದಲ್ಲಿ ಅದು ನಮ್ಮನ್ನೇ ಸುಡುತ್ತದೆ; ಚಿತೆಯಾಗಿ ಅಪಾಯಕಾರಿಯಾಗುತ್ತದೆ. ದೇಹದಲ್ಲಿ ಅಗ್ನಿಯ ಅಂಶ ಅಧಿಕವಾದಾಗ 'ಉರಿ'ಯ ಅನುಭವವಾಗುತ್ತದೆ. ಕನ್ನಡದ ಈ 'ಉರಿ' ಪದ ಜೀವಂತ ಸುಡುವ ಆದರೆ ಸಾವನ್ನು ತರದೆ ನೋವು ಕೊಡುವ ನಿರಂತರ ಬಾಧೆಯ ಅರ್ಥವನ್ನು ಸ್ಫುರಿಸುತ್ತದೆ. ಇದು ತನ್ನ 'ಬೆಚ್ಚನೆ'ಯ ಚೌಕಟ್ಟನ್ನು ಮೀರಿ ಬೆಂಕಿಯಾದಾಗ ಹಿಮದಂತೆ ಅಪಾಯಕಾರಿಯಾಗುತ್ತದೆ.

ಅಂದರೆ 'ಅಗ್ನಿ' ಮತ್ತು 'ಹಿಮ' ನಮಗೆ ಬೇಕೇಬೇಕು. ಆದರೆ ಅವು ಅತಿಯಾಗಬಾರದು. ಅತಿಯಾದಾಗ ಮೂಲಭೂತ ವಸ್ತುಗಳ ಅಸಮತೋಲನ ಪ್ರಾಪ್ತವಾಗಿ ಪ್ರಕೃತಿ ಏರುಪೇರಾಗುತ್ತದೆ. ಜೀವಿ ಸಾವಿನಂಚಿಗೆ ಸಾಗುತ್ತದೆ. ಈ ಎರಡು 'ವಸ್ತು'ಗಳು ಮಾತ್ರವಲ್ಲ 'ಗಾಳಿ'ಯ ಕೊರತೆ ಸಾವು ತರುತ್ತದೆ; ಮಣ್ಣಿನ ಕೊರತೆ ರೋಗ ರುಜಿನಗಳಿಗೆ ಪಾತ್ರವಾಗುತ್ತದೆ. ಆದುದರಿಂದ ನಮ್ಮ ದೇಹದಲ್ಲಿ ಈ ವಸ್ತುಗಳ ಸಮತೋಲನ, ಸಮರಸ ಸಾಮರಸ್ಯವಿರಬೇಕು. ಆಗ ಮೈಮನಗಳು ಆನಂದವಾಗಿಯೂ ಆರೋಗ್ಯವಾಗಿಯೂ ಇರುತ್ತವೆ.

ಇಲ್ಲಿ ಮುಖ್ಯವಾಗಿ ಅಗ್ನಿ ಮತ್ತು ಹಿಮಗಳನ್ನು ಮೂಲಭೂತ ವಸ್ತುಗಳೆಂಬಂತೆ ನೋಡುವುದರ ಬದಲು ಜೀವಿಯ ಮನೋನೆಲೆಯಲ್ಲಿ ಅವು ಸ್ಥಾಪಿತಗೊಂಡಿರುವ ಗುಣವಿಶೇಷಗಳೆಂದೇ ಪರಿಗಣಿಸುವುದು ಸೂಕ್ತ. ಕವಿಯ ಉದ್ದೇಶವೂ ಅದೇ ಆಗಿದೆ. ನಾವು ಬೆಂಕಿಯಾಗುವುದು ಬೇಡ; ಬೆಚ್ಚನೆಯ ಅಪ್ಪುಗೆಯಾಗಬೇಕು. ನಮ್ಮ ತಲೆಯಲ್ಲಿ– ಮನಸ್ಸಿನಲ್ಲಿ ಶೀತಲರಾಗುವುದು ಬೇಡ; ಬದುಕನ್ನು ರಕ್ಷಿಸುವ ನೀರಾಗಬೇಕು.

■ ಶಿಕಾಕು

# ಮಾತೇ ಮುತ್ತು

ಪ್ರೇಮಿಗಳು ಎಂದೂ ಪರಸ್ಪರ ಆಸಕ್ತಿ ಕಳೆದುಕೊಳ್ಳುವುದಿಲ್ಲ; ಏಕೆಂದರೆ ಅವರು ಸದಾ ತಮ್ಮ ಬಗ್ಗೆಯೇ ಮಾತನಾಡುತ್ತಾರೆ.
–ರೋಚೆಫಕಾಲ್ಡ್

ದೇವರೂ ಸಹ ಪ್ರೇಮಿಸಿದಾಗ ಬುದ್ಧಿವಂತನಾಗಿ ಇರಲಾರ.
–ಪಿ.ಸೈರಸ್

ಈ ವಸ್ತು ನನಗೆ ಮಾತ್ರ ಸೇರಿದ್ದು ಎನ್ನುವುದು ಪ್ರೀತಿಯಲ್ಲ, ಪರಸ್ಪರ ತಿಳಿವಳಿಕೆಯೇ ಪ್ರೀತಿ.
–ಅನುಭವಾಮೃತ

ಅವಕಾಶ ಸಿಕ್ಕಿದಾಗಲೆಲ್ಲ ಬದಲಾಗುವ ಪ್ರೇಮ– ಪ್ರೇಮವೇ ಅಲ್ಲ.
–ಶೇಕ್ಸ್‌ಪಿಯರ್

ಯಾರೂ ಇನ್ನೊಬ್ಬರ 'ಅನುಮತಿ' ಇಲ್ಲದೆ ಅವರನ್ನಾಳುವಷ್ಟು ಶ್ರೇಷ್ಠರಲ್ಲ.
–ಅಬ್ರಹಾಂ ಲಿಂಕನ್

'ವ್ಯರ್ಥವಾದ ಪ್ರೀತಿ' ಎನ್ನಬೇಡ. ಏಕೆಂದರೆ ಪ್ರೀತಿ ಎಂದೂ ವ್ಯರ್ಥವಾಗುವುದಿಲ್ಲ.
–ಲಾಂಗ್ ಫೆಲೋ

ಪ್ರೇಮ ಎಂದರೆ ತನ್ನಲ್ಲಿ ಇನ್ನೊಬ್ಬರನ್ನೂ, ಇನ್ನೊಬ್ಬರಲ್ಲಿ ತನ್ನನ್ನೂ ಕಾಣುವ ಪ್ರಯತ್ನ.
–ಗೋಪಾಲಕೃಷ್ಣ ಅಡಿಗ

ಪ್ರಪಂಚದಲ್ಲಿ ಇರುವುದು ಎರಡೇ ಜಾತಿ; ಇರುವವರದು, ಇಲ್ಲದವರದು.
–ಸರ್ ವಾಂಟಿಸ್

ಭರವಸೆ ಬಡವನನ್ನು ಜೀವದಿಂದಿರಿಸುತ್ತದೆ; ಭಯ ಶ್ರೀಮಂತನನ್ನು ಕೊಲ್ಲುತ್ತದೆ.
–ಫಿನ್‌ಲೆಂಡ್ ಗಾದೆ

ವೇದವೆಂಬುದು ಓದಿನ ಮಾತು. ಶಾಸ್ತ್ರವೆಂಬುದು ಸಂತೆಯ ಸುದ್ದಿ. ಪುರಾಣವೆಂಬುದು ಪಂಡಿತರ ಗೋಷ್ಠಿ. ತರ್ಕವೆಂಬುದು ಟಗರ ಹೋರಟೆ.

ಭಕ್ತಿಯೆಂದರೆ ತೋರಿ ಉಂಬ ಲಾಭ.
–ಅಲ್ಲಮಪ್ರಭು

ಭವಿಷ್ಯದ ಅತ್ಯುತ್ತಮ ಪ್ರವಾದಿ 'ಭೂತ ಕಾಲವೇ'.
–ಪಿ.ಬಿ.ಷೆಲ್ಲಿ

ಮದುವೆ ಯಶಸ್ವಿಯಾದರೆ ರೆಕ್ಕೆ ಬಂದಂತೆಯೇ; ಹಾಗಾಗದಿದ್ದಾಗ ಗಂಡ–ಹೆಂಡತಿ ರೆಕ್ಕೆ ಮುರಿದ ಪಕ್ಷಿಗಳೇ.
–ಹೆನ್ರಿ ಡೇವಿಡ್

ಮದುವೆ ಆದವನಿಗೆ ಅನೇಕ ಕಷ್ಟಗಳಿವೆ. ಆದರೆ ಮದುವೆ ಆಗದವನಿಗೆ ಯಾವ ಸಂತೋಷವೂ ಇಲ್ಲ.
–ಸ್ಯಾಮುಯಲ್ ಜಾನ್ಸನ್

ಶಿಷ್ಯನಿಂದ ಸೋಲನ್ನು ಬಯಸುವವನು ನಿಜವಾದ ಗುರು.
–ಸಂಸ್ಕೃತ ಶ್ಲೋಕ